**ಓ.ಎಸ್. – 19/2013**

**ಪಿ.ಡಬ್ಲೂ – 1**

**ಸಾಕ್ಷಿಯನ್ನು ದಿಃ 14.11.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜಡ್.ಎ. ವಕೀಲರಿಂದ**

1. ನನ್ನ ತಂದೆಯ ಹೆಸರು ಪೊಲೀಸ್ ರಂಗಪ್ಪ ಎಂದರೆ ಸರಿ. ನನ್ನ ತಂದೆ ಪೊಲೀಸ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ನನ್ನ ತಂದೆ ಪೊಲೀಸ್ ಆಗಿ ನಿವೃತ್ತಿ ಹೊಂದಿರುವುದಿಲ್ಲ, ಮಧ್ಯದಲ್ಲಿಯೇ ಕೆಲಸವನ್ನು ಬಿಟ್ಟರು, ಹೇಗೆ ಬಿಟ್ಟರು ಎಂದು ನನಗೆ ಗೊತ್ತಿಲ್ಲ. ಯಾವ ವರ್ಷದಲ್ಲಿ ನನ್ನ ತಂದೆ ಪೊಲೀಸ್ ಕೆಲಸವನ್ನು ಬಿಟ್ಟರು ಎಂದು ನನಗೆ ಗೊತ್ತಿಲ್ಲ. ನಾನು ದಿಃ01.03.1954 ರಂದು ಜನಿಸಿರುತ್ತೇನೆ. ನಾನು ಈಗ ನೋಡುತ್ತಿರುವ ದಾಖಲೆಯು ನನ್ನ ಜನನ ದೃಢೀಕರಣ ಪತ್ರವಾಗಿರುತ್ತದೆ. ಸಾಕ್ಷಿಯು ಜನನ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನನ್ನ ತಂದೆ ಮೃತಪಟ್ಟ ದಿನಾಂಕ ನನಗೆ ನೆನಪಿಲ್ಲ. ನನ್ನ ತಂದೆ ಎಲ್ಲಿ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಮನೆ ಬಿಟ್ಟು ಹೋಗಿದ್ದರು, ಹಾಗಾಗಿ ಎಲ್ಲಿ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ನಾನು ಹುಟ್ಟಿದ 1 ವರ್ಷದಲ್ಲಿಯೇ 1955 ರ ಡಿಸೆಂಬರ್ ನಲ್ಲಿ ಸಾಗರದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ನನ್ನ ತಂದೆ ನನ್ನ ಪ್ರಕಾರ ದೇಶಾಂತರ ಹೋಗಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು 4 ಅನುಸೂಚಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿರುತ್ತದೆ. ನಿಪಿ 1 ದಿಃ12.05.1970 ರ ಸೇಲ್ ಸರ್ಟಿಫಿಕೇಟ್ ಗೂ ಮೊದಲು ಇದ್ದ ದಾವಾ ಸ್ವತ್ತಿನ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತು ಮೂಲತಃ ಪುರಸಭೆಗೆ ಸೇರಿದ ಸ್ವತ್ತಾಗಿತ್ತು. ನಾವು ಹುಟ್ಟುವಾಗ ನನ್ನ ತಂದೆ ನನ್ನ ತಾಯಿಯ ಜೊತೆಯಲ್ಲಿಯೇ ಇದ್ದರು, ನಂತರ ಎಲ್ಲಿ ಹೋದರು ಎಂದು ನನಗೆ ಗೊತ್ತಿಲ್ಲ.

3. ಈಗ ನಾನು ನೋಡುತ್ತಿರುವ ನೋಟೀಸ್ ಪುರಸಭೆ ರವರು ನನ್ನ ತಂದೆ ಗೆ ದಾವಾ ಎ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ನೀಡಿರುವ ನೋಟೀಸ್ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿದು, ಅದರಲ್ಲಿರುವ ಅಕ್ಷರಗಳ ಕೆಲವು ಭಾಗ ಅಳಿಸಿ ಹೋಗಿರುತ್ತವೆ ಎಂದು ನುಡಿಯುತ್ತಾರೆ.

ದಾವಾ ಎ ಅನುಸೂಚಿ ಸ್ವತ್ತು ನನ್ನ ತಂದೆ ಅವರ ಜೀವಿತಾವಧಿಯಲ್ಲಿ ಬಗರ್ ಹುಕುಂ ಅಡಿಯಲ್ಲಿ ಸ್ವಾಧೀನದಲ್ಲಿದ್ದು ಬಂದ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿ ದಾವಾ ಎ ಅನುಸೂಚಿ ಸ್ವತ್ತು ನನಗೆ ಸೇರಿದ್ದು ಎಂದು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಎ ಅನುಸೂಚಿ ಸ್ವತ್ತು ನನ್ನ ತಾಯಿಗೆ ಸೇರಿದ್ದು ಎಂದು ನನ್ನ ತಾಯಿ ಹೇಳಿದ ಕಾರಣಕ್ಕೆ ನನಗೆ ತಿಳಿದಿರುತ್ತದೆ ಎಂದರೆ ಸರಿ.

4. 1970 ಕ್ಕಿಂತಲೂ ಹಿಂದೆ ದಾವಾ ಸ್ವತ್ತು ನನ್ನ ತಾಯಿಯ ಸ್ವಾಧೀನದಲ್ಲಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿರುತ್ತೇನೆ. ಪ್ರತಿವಾದ ಪತ್ರವನ್ನು ಓದಿ ನಾನು ಅರ್ಥೈಸಿಕೊಂಡಿರುತ್ತೇನೆ. ಪ್ರತಿವಾದ ಪತ್ರದಲ್ಲಿ ಪ್ರತಿವಾದಿಯರು ದಾವಾ ಸ್ವತ್ತು ನನ್ನ ತಂದೆಗೆ ಸೇರಿದ ಸ್ವತ್ತು ಎಂದು ಬರೆದಿದ್ದು, ಅದನ್ನು ನೋಡಿದ ನಂತರ ನಾನು ದಾವಾ ಸ್ವತ್ತಿನ 1970 ಕ್ಕಿಂತಲೂ ಹಿಂದಿನ ದಾಖಲೆಗಳನ್ನು ಪಡೆದು ಪರಿಶೀಲಿಸುವ ಪ್ರಯತ್ನವನ್ನು ಮಾಡಿರುವುದಿಲ್ಲ. ಈಗ ನಾನು ನೋಡುತ್ತಿರುವ ರಶೀದಿಯು ದಾವಾ ಸ್ವತ್ತಿಗೆ ಸಂಬಂಧಿಸಿದ ಕಂದಾಯವನ್ನು ಪಾವತಿಸಿರುವ ರಶೀದಿ ಎಂದರೆ ಸರಿ. ಸಾಕ್ಷಿಯು ರಶೀದಿಯನ್ನು ನೋಡಿ ಗುರುತಿಸಿದ್ದು, ರಶೀದಿಯನ್ನು ನಿಡಿ 2 ಎಂದು ಗುರುತಿಸಲಾಯಿತು. 1957 ರಲ್ಲಿ ನನ್ನ ತಾಯಿ ಕಂದಾಯವನ್ನು ಪಾವತಿಸುವ ಮೊದಲೇ 1955 ರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ನನ್ನ ತಾಯಿ 1999 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ ಸಾಗರದಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ ಮೃತಪಡುವ ಮೊದಲು ಮುನಿಸಿಫಲ್ ಕಚೇರಿಯ ಎದುರು ಬರುವ ಆಸ್ಪತ್ರೆಯಲ್ಲಿ ದಾಖಲಾಗಿದ್ದರು, ಆಸ್ಪತ್ರೆಯ ಹೆಸರು ನನಗೆ ನೆನಪಿಗೆ ಬರುತ್ತಿಲ್ಲ. ನನ್ನ ತಾಯಿಗೆ ಮೆದುಳಿನ ರಕ್ತಸ್ರಾವ ಆಗಿತ್ತು. ನನ್ನ ತಾಯಿ 15 ರಿಂದ 20 ದಿನ ಕೋಮಾದಲ್ಲಿದ್ದರು. ನನ್ನ ತಾಯಿ ಆಸ್ಪತ್ರೆಯಲ್ಲಿದ್ದಾಗ ನಾನು ಆಸ್ಪತ್ರೆಗೆ ಬಂದು ಅವರನ್ನು ನೋಡಿಕೊಂಡು ಹೋಗಿರುತ್ತೇನೆ, ಅವರ ಸೇವೆಯನ್ನು ನಾನು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ನನಗೆ ಗರ್ಭಕೋಶದ ಶಸ್ತ್ರ ಚಿಕಿತ್ಸೆ ಆಗಿದ್ದ ಕಾರಣ ಅವರ ಸೇವೆ ಮಾಡಲು ಆಗಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮೃತಪಟ್ಟಾಗ ನಾನು ನೋಡಲು ಬಂದಿದ್ದೆ, ಆದರೆ ನಾನು ಬರುವುದರೊಳಗೆ ನನ್ನ ತಾಯಿಯ ಅಂತ್ಯ ಸಂಸ್ಕಾರ ಮುಗಿದು ಹೋಗಿತ್ತು.

ನನ್ನ ತಾಯಿಯ ತಿಥಿ ಕಾರ್ಯಗಳಿಗೆ ನಾನು ಬರಲಿಲ್ಲ. ಸಾಕ್ಷಿಯು ಮುಂದುವರೆದು ಮೇಲೆ ಹೇಳಿದಂತೆ ನನಗೆ ಶಸ್ತ್ರ ಚಿಕಿತ್ಸೆಯಾದ ಕಾರಣ ನಾನು ಬರಲಿಲ್ಲ ಎಂದು ನುಡಿಯುತ್ತಾರೆ.

6. ಗರ್ಭಕೋಶದ ಶಸ್ತ್ರಚಿಕಿತ್ಸೆ ಆಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ಈಗ ನನ್ನ ಬಳಿ ಇರುವುದಿಲ್ಲ. ನನಗೆ ಗರ್ಭಕೋಶದ ಶಸ್ತ್ರಚಿಕಿತ್ಸೆ ಆದ ವರ್ಷ ನೆನಪಿಲ್ಲ, ಆದರೆ ಆಗ ನನಗೆ 45 ವರ್ಷ ವಯಸ್ಸಾಗಿತ್ತು. ನನಗೆ ಗರ್ಭಕೋಶದ ಶಸ್ತ್ರಚಿಕಿತ್ಸೆ ಆದ ಆಸ್ಪತ್ರೆ ನನಗೆ ನೆನಪಾಗುತ್ತಿಲ್ಲ, ಆದರೆ ಗರ್ಭಕೋಶದ ಶಸ್ತ್ರಚಿಕಿತ್ಸೆ ಮಾಡಿದ ವೈದ್ಯರು ಮೈಸೂರಿನ ಡಾಕ್ಟರ್ ಸುಧಾರಾವ್ ರವರು. ಮೈಸೂರಿಗೆ ಹೋಗಿ ನನಗೆ ಗರ್ಭಕೋಶದ ಶಸ್ತ್ರಚಿಕಿತ್ಸೆ ಯನ್ನು ಮಾಡಿದ ಆಸ್ಪತ್ರೆಯನ್ನು ಕಂಡು ಹಿಡಿದು ಗರ್ಭಕೋಶದ ಶಸ್ತ್ರಚಿಕಿತ್ಸೆ ಗೆ ಸಂಬಂಧಿಸಿದ ದಾಖಲೆಯನ್ನು ತರಲು ತೊಂದರೆ ಇರುವುದಿಲ್ಲ, ಆದರೆ ಅದು ಈಗ ಸಿಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ನನ್ನ ತಾಯಿಯನ್ನು ನೋಡಲು ವರ್ಷಕ್ಕೆ ಒಮ್ಮೆ ಮೈಸೂರಿನಿಂದ ಸಾಗರಕ್ಕೆ ಬರುತ್ತಿದ್ದೆ, ನನ್ನ ತಾಯಿಗೆ 1996–1997 ರಲ್ಲಿ ಬೆನ್ನಿನ ಮೂಳೆ ಪುಡಿಪುಡಿಯಾಗಿ ತೊಂದರೆ ಇತ್ತು, ಆಗ ನಾನು ಅವರನ್ನು ಮೈಸೂರಿನ ಕಾಮಾಕ್ಷಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿ 1.5 ತಿಂಗಳ ಕಾಲ ನನ್ನ ತಾಯಿ ಬೆಡ್ ರೆಸ್ಟ್ ನಲ್ಲಿದ್ದಾಗ ಅವರ ಸೇವೆಯನ್ನು ನಾನು ಮಾಡಿರುತ್ತೇನೆ. ನನ್ನ ತಾಯಿಗೆ ಬೆನ್ನಿನ ಮೂಳೆಗೆ ಸಂಬಂಧಿಸಿದಂತೆ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿರುವುದಿಲ್ಲ, ಬೆಡ್ ರೆಸ್ಟ್ ಮೂಲಕವೇ ಅವರು ಗುಣಮುಖರಾದರು. ನನ್ನ ತಾಯಿಗೆ ಚಿಕಿತ್ಸೆ ಕೊಡಿಸಿದ ಖರ್ಚು ವೆಚ್ಚಗಳು ನನಗೆ ಈಗ ನೆನಪಿಲ್ಲ.

7. ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯಲ್ಲಿ ನನ್ನ ತಾಯಿಗೆ ಚಿಕಿತ್ಸೆಯನ್ನು ನೀಡಿದ ವೈದ್ಯರಾದ ಡಾಕ್ಟರ್ ನಾಗಭೂಷಣ್ ರವರ ಬಳಿ ನನ್ನ ತಾಯಿಯ ಚಿಕಿತ್ಸೆಗೆ ಸಂಬಂಧಿಸಿದ ದಾಖಲೆಗಳು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಆ ದಾಖಲೆಗಳು ಸಿಕ್ಕರೆ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇನೆ. ನನ್ನ ತಾಯಿ ಆಗಾಗ ಮೈಸೂರಿನ ನನ್ನ ಮನೆಗೆ ಬರುತ್ತಿದ್ದರು. ದಾವಾ ಸ್ವತ್ತುಗಳ ಅಕ್ಕಪಕ್ಕದಲ್ಲಿ ನನಗೆ ಪರಿಚಯವಿರುವವರು ಇರುತ್ತಾರೆ. ನನ್ನ ತಾಯಿಯ ಆರೈಕೆ ಮಾಡಿರುವುದನ್ನು ನೋಡಿರುವವರು ಈಗ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಾಯಿಯನ್ನು ನಾನು ಆರೈಕೆ ಮಾಡಿರುವುದನ್ನು ನೋಡಿರುವ ಸಾಕ್ಷಿದಾರರು ಈಗ ಯಾರು ಇರುವುದಿಲ್ಲ.

8. ನನ್ನ ತಾಯಿ ಮೃತಪಡುವ 10 ವರ್ಷಗಳ ಹಿಂದೆಯೇ ಅವರಿಗೆ ಪಾರ್ಶ್ವವಾಯು ಆಗಿತ್ತು ಎಂದರೆ ಸರಿಯಲ್ಲ. ಆ ಪಾರ್ಶ್ವವಾಯು ಕಾರಣದಿಂದ ನನ್ನ ತಾಯಿ 1 ತಿಂಗಳವರೆಗೆ ಸಾಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1996–1997 ರ ಸಮಯದಲ್ಲಿ ನನ್ನ ತಾಯಿಯ ಬೆನ್ನು ಮೂಳೆ ಪುಡಿಯಾಗಿರುವುದಕ್ಕೆ ಚಿಕಿತ್ಸೆ ಕೊಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿ ಬೆನ್ನು ಮೂಳೆ ಪುಡಿಯಾಗಿದ್ದಾಗ ಅವರನ್ನು ಮನೆಯಿಂದ ರೈಲ್ವೆ ನಿಲ್ದಾಣಕ್ಕೆ ಆಟೋ ದಲ್ಲಿ, ರೈಲಿನಲ್ಲಿ ಮೈಸೂರಿಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ಆ ರೀತಿ ನನ್ನ ತಾಯಿಯನ್ನು ಮೈಸೂರಿಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವರ್ಷ ನಾನು ಸಾಗರಕ್ಕೆ ಬರುತ್ತಿದ್ದೆ, ನನ್ನ ತಾಯಿ ಮೈಸೂರಿಗೆ ಬರುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

9. ನನ್ನ ಮತ್ತು ನನ್ನ ಅಣ್ಣನಾದ 1 ನೇ ಪ್ರತಿವಾದಿಯ ಸಂಬಂಧ ಚೆನ್ನಾಗಿತ್ತು. ನನ್ನ ಅಣ್ಣ ಮತ್ತು ನನ್ನ ಗಂಡನ ಸಂಬಂಧ ಹೇಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ, ಕುಟುಂಬದ ವಿಷಯಗಳನ್ನು ಇಲ್ಲಿ ಚರ್ಚಿಸಲು ಆಗುವುದಿಲ್ಲ. ನನ್ನ ಅಣ್ಣ ಮೃತಪಟ್ಟಾಗ ನಾನು ಸಾಗರಕ್ಕೆ ಬರಲಿಲ್ಲ.

10. ನನ್ನ ತಾಯಿ 1991 ರಲ್ಲಿ ಮರಣ ಶಾಸನವನ್ನು ಬರೆದುಕೊಟ್ಟಿರುತ್ತಾರೆ. ಮರಣ ಶಾಸನದ ಅಸಲು ಪ್ರತಿ ನನ್ನ ಅಣ್ಣ 1 ನೇ ಪ್ರತಿವಾದಿಯ ಬಳಿ ಇತ್ತು, ನನ್ನ ಬಳಿ ಮರಣಶಾಸನದ ನಕಲು ಪ್ರತಿ ಮಾತ್ರ ಇತ್ತು. ಸದರಿ ನನ್ನ ಬಳಿ ಇರುವ ಮರಣ ಶಾಸನದ ನಕಲು ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನನ್ನ ತಾಯಿ ಮರಣಶಾಸನವನ್ನು ಮಾಡಿದ 5–6 ವರ್ಷಗಳ ನಂತರ ನನಗೆ ನನ್ನ ತಾಯಿ ಮಾಡಿರುವ ಮರಣ ಶಾಸನದ ಬಗ್ಗೆ ತಿಳಿಯಿತು. ಮರಣ ಶಾಸನವನ್ನು ಬರೆದವರು ಯಾರು ಗೊತ್ತಿಲ್ಲ ಮತ್ತು ಅದಕ್ಕೆ ಸಾಕ್ಷಿದಾರರು ಎಂದು ಎಷ್ಟು ಜನ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ ಒಬ್ಬರು ಭಾಸ್ಕರ್ ರಾವ್ ಎಂಬುವವರು ಇರುತ್ತಾರೆ. ಭಾಸ್ಕರ್ ರಾವ್ ರವರು ಯಾರು ಎಂದು ನನಗೆ ಗೊತ್ತು, ಅವರು ಇನ್ನೂ ಜೀವಂತವಾಗಿರುತ್ತಾರೆ. ಮರಣಶಾಸನದ ಅಸಲು ಪ್ರತಿಯನ್ನು ನನ್ನ ತಾಯಿ ನನ್ನ ಅಣ್ಣನಿಗೆ ನೀಡುವಾಗ ನಾನು ಇರಲಿಲ್ಲ.

ನನ್ನ ತಾಯಿ ನನಗೆ ಮರಣಶಾಸನದ ಅಸಲು ಪ್ರತಿ ನನ್ನ ಅಣ್ಣನ ಬಳಿ ಇರುವ ವಿಷಯವನ್ನು ತಿಳಿಸಿದರು. ನಾನು ಮರಣಶಾಸನದ ಅಸಲು ಪ್ರತಿಯ ಕುರಿತು ನನ್ನ ಅಣ್ಣನ ಬಳಿ ಚರ್ಚಿಸಿರುವುದಿಲ್ಲ.

**ಪ್ರತಿವಾದಿಯರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ